# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಸರ್ಕಾರದ ನೇರ ಸೌಲಭ್ಯ ವರ್ಗಾವಣೆಯ ಜಾರಿಗೊಳಿಸುವಿಕೆಗಾಗಿ ರಾಜ್ಯ ಮಟ್ಟದ ಮೇಲ್ವಿಚಾರಣ ಸಮಿತಿ (DBT-L Oversight Committee) ಮತ್ತು ಜಿಲ್ಲಾ ಮಟ್ಟದ DBT-L ಜಾರಿಗೊಳಿಸುವ ಸಮಿತಿ (District Level Committee)ಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ:
1. ಕಾರ್ಯದರ್ಶಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ, ನವದೆಹಲಿ ಇವರ ದಿನಾಂಕ: 28.05.2013ರ ಅ.ಸ ಪತ್ರದ ಸಂಖ್ಯೆ: ಪಿ-20019/77/2012-ಎಲ್‌ಪಿಜಿ.
2. ಕಾರ್ಯದರ್ಶಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ, ನವದೆಹಲಿ ಇವರ ದಿನಾಂಕ: 09.09.2013ರ ಅ.ಸ.ಪತ್ರ ಸಂ: ಪಿ-23015/6/2013-ಎಲ್‌ಪಿಜಿ
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಇವರ ದಿನಾಂಕ: 24.09.2013ರ ಟಿಪ್ಪಣಿ ಸಂಖ್ಯೆ: ಸಿಇಜಿ/14/ಡಿಬಿಟಿ/2013.

ಪ್ರಸ್ತಾವನೆ:

1. ಮೇಲೆ (1) ಮತ್ತು (2)ಗಳಲ್ಲಿ ಓದಲಾದ ಕೇಂದ್ರ ಸರ್ಕಾರದ ದಿನಾಂಕ: 28.05.2013 ಮತ್ತು 09.09.2013ರ ಪತ್ರಗಳನ್ನು ಉಲ್ಲೇಖಿಸಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು, ಮೇಲೆ(3)ರಲ್ಲಿ ಓದಲಾದ ಅವರ ದಿನಾಂಕ: 24.09.2013ರ ಪತ್ರದ ಮೂಲಕ ತಿಳಿಸಿದಂತೆ, ಕೇಂದ್ರ ಸರ್ಕಾರವು ದಿನಾಂಕ: 01.06.2013ರಿಂದ ರಾಜ್ಯದ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಎಲ್‌ಪಿಜಿ ಬಳಕೆದಾರರಿಗೆ ನೇರ ಹಣಸಂದಾಯ {Direct Benefit Transfer for LPG(DBTL)} ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ವಯ ಎಲ್‌ಪಿಜಿ ಬಳಕೆದಾರರು ಅವರ ಆಧಾರ್ ಸಂಖ್ಯೆಯನ್ನು ಎಲ್‌ಪಿಜಿ ಬಳಕೆದಾರರ ಸಂಖ್ಯೆ ಮತ್ತು ಅವರ ಬ್ಯಾಂಕ್ ಖಾತೆಗೆ ಜೋಡಿಸಿರುತ್ತಾರೋ ಅಂತಹವರಿಗೆ ಮಾರುಕಟ್ಟೆಯ ದರದ ಮೇರೆಗೆ ಎಲ್‌ಪಿಜಿ ಸಿಲಿಂಡರ್ ಸರಬರಾಜು ಮಾಡಿದ ನಂತರ ಅವರಿಗೆ ದೊರೆಯಬಹುದಾದ ಸಬ್ಸಿಡಿ ಮೊಬಲಗನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗಲಿದೆ. ಈ ಯೋಜನೆಯು ಈ ಕೆಳಕಂಡ ಜಿಲ್ಲೆಗಳಿಗೆ ವಿಸ್ತರಣೆಯಾಗಲಿದೆ:-

| ಡಿಬಿಟಿಎಲ್ ಜಿಲ್ಲೆಗಳು | | |
|---|---|---|
| ಕ್ರ. ಸಂ | ಜಿಲ್ಲೆ | ಜಾರಿಗೆ ಬರುವ ದಿನಾಂಕ |
| 1 | ಧಾರವಾಡ | 01 ಅಕ್ಟೋಬರ್ 2013 |
| 2 | ಉಡುಪಿ | 01 ಅಕ್ಟೋಬರ್ 2013 |
| 3 | ಗದಗ್ | 01 ನವೆಂಬರ್ 2013 |
| 4 | ಉತ್ತರ ಕನ್ನಡ | 01 ನವೆಂಬರ್ 2013 |
| 5 | ಹಾವೇರಿ | 01 ಡಿಸೆಂಬರ್ 2013 |
| 6 | ದಾವಣಗೆರೆ | 01 ಡಿಸೆಂಬರ್ 2013 |
| 7 | ಬೆಂಗಳೂರು ಸಿಟಿ | 01 ಡಿಸೆಂಬರ್ 2013 |
| 8 | ಬಿಜಾಪುರ | 01 ಡಿಸೆಂಬರ್ 2013 |
| 9 | ಕೊಪ್ಪಳ | 01 ಡಿಸೆಂಬರ್ 2013 |
| 10 | ಬೀದರ್ | 01 ಡಿಸೆಂಬರ್ 2013 |
| 11 | ಕೋಲಾರ | 01 ಜನವರಿ 2014 |
| 12 | ಕೊಡಗು | 01 ಜನವರಿ 2014 |
| 13 | ಬೆಂಗಳೂರು ಗ್ರಾಮೀಣ | 01 ಜನವರಿ 2014 |
| 14 | ಚಿಕ್ಕಬಳ್ಳಾಪುರ | 01 ಜನವರಿ 2014 |

| | | |
|---|---|---|
| 15 | ದಕ್ಷಿಣ ಕನ್ನಡ | 01 ಜನವರಿ 2014 |
| 16 | ಬೆಳಗಾಂ | 01 ಜನವರಿ 2014 |
| 17 | ಚಿಕ್ಕಮಂಗಳೂರು | 01 ಜನವರಿ 2014 |
| 18 | ಬಾಗಲಕೋಟೆ | 01 ಜನವರಿ 2014 |
| 19 | ಗುಲ್ಬರ್ಗ | 01 ಜನವರಿ 2014 |
| 20 | ರಾಮನಗರ | 01 ಜನವರಿ 2014 |
| 21 | ಬಳ್ಳಾರಿ | 01 ಜನವರಿ 2014 |
| 22 | ಚಾಮರಾಜನಗರ | 01 ಜನವರಿ 2014 |
| 23 | ಮಂಡ್ಯ | 01 ಜನವರಿ 2014 |
| 24 | ತುಮಕೂರು (ಈಗಾಗಲೇ ಜಾರಿಗೊಳಿಸಲಾಗಿದೆ) | 01 ಜನವರಿ 2013 |
| 25 | ಮೈಸೂರು (ಈಗಾಗಲೇ ಜಾರಿಗೊಳಿಸಲಾಗಿದೆ) | 01 ಜನವರಿ 2013 |

2. ಈ ಯೋಜನೆಯ ಅನುಷ್ಠಾನದಲ್ಲಿ ವಿವಿಧ ಪಾಲುದಾರರು (stockholders) ಪಾಲ್ಗೊಳ್ಳುವುದರಿಂದ ಯೋಜನೆಯ ಕ್ರಮಬದ್ಧ ಅನುಷ್ಠಾನಕ್ಕೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸುವ ಅವಶ್ಯಕತೆಯಿರುತ್ತದೆಯೆಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರು ಪ್ರಸ್ತಾಪಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 88 ಇಆಇ 2013, ಬೆಂಗಳೂರು ದಿನಾಂಕ: 26ನೇ ಅಕ್ಟೋಬರ್ 2013**

3. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ, ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ(DBT-L Oversight Committee)ಯನ್ನು ಸರ್ಕಾರ ಈ ಮೂಲಕ ರಚಿಸಿದೆ:-

ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯ ರಚನೆ:-

| | |
|---|---|
| 1. ಮುಖ್ಯ ಕಾರ್ಯದರ್ಶಿಯವರು | - ಅಧ್ಯಕ್ಷರು |
| 2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಕಂದಾಯ ಇಲಾಖೆ | - ಸದಸ್ಯರು |
| 3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | - ಸದಸ್ಯರು |
| 4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ | - ಸದಸ್ಯರು |
| 5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | - ಸದಸ್ಯರು |
| 6. ಸರ್ಕಾರದ ಕಾರ್ಯದರ್ಶಿಯವರು, ಸಿಆಸುಇ(ಇ-ಆಡಳಿತ) | - ಸದಸ್ಯರು |
| 7. ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | - ಸದಸ್ಯರು |
| 8. ನಿರ್ದೇಶಕರು, ಜನಗಣತಿ ಇಲಾಖೆ | - ಸದಸ್ಯರು |
| 9. ಡೆಪ್ಯೂಟಿ ಡೈರೆಕ್ಟರ್ ಜನರಲ್, ಯುಐಡಿಎಐ, ಪ್ರಾದೇಶಿಕ ಕಛೇರಿ, ಬೆಂಗಳೂರು | - ಸದಸ್ಯರು |
| 10. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ | - ಸದಸ್ಯರು |
| 11. ತೈಲ ಮಾರಾಟ ಕಂಪನಿಗಳ ಪ್ರತಿನಿಧಿಗಳು | - ಸದಸ್ಯರು |
| 12. ಜನರಲ್ ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್ ಮತ್ತು ಸಂಚಾಲಕರು ಎಸ್‌ಎಲ್‌ಬಿಸಿ | - ಸದಸ್ಯರು |
| 13. ತೈಲ ಮಾರಾಟ ಕಂಪನಿಗಳ ರಾಜ್ಯ ಮಟ್ಟದ ಸಮಾಲೋಚಕರು | - ಸಂಚಾಲಕರು |

4. ಮೇಲ್ಕಂಡ ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ (DBT-L Oversight Committee)ಯು ರಾಜ್ಯ ಮಟ್ಟದಲ್ಲಿ ಈ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಉಸ್ತುವಾರಿ (Supervision and monitoring) ಮಾಡತಕ್ಕದ್ದು ಮತ್ತು ಅದರ ಅನುಷ್ಠಾನದಲ್ಲಿ ಉಂಟಾಗುವ ಅಡಚಣೆ/ಸಮಸ್ಯೆಗಳನ್ನು ಪರಿಹರಿಸತಕ್ಕದ್ದು ಹಾಗೂ ಈ ಯೋಜನೆಯ ತ್ವರಿತ ಅನುಷ್ಠಾನವಾಗುವಂತೆ ನೋಡಿಕೊಳ್ಳತಕ್ಕದು.

5. ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ರಚನೆ:-

| | |
|---|---|
| 1. ಜಿಲ್ಲಾಧಿಕಾರಿಯವರು | - ಅಧ್ಯಕ್ಷರು |
| 2. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ | - ಸದಸ್ಯರು |
| 3. ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ | - ಸದಸ್ಯರು |
| 4. ಆಯುಕ್ತರು/ಮುಖ್ಯಾಧಿಕಾರಿಯವರು, ನಗರ ಪಾಲಿಕೆ ಮತ್ತು ಪುರಸಭೆಗಳು | - ಸದಸ್ಯರು |
| 5. ಲೀಡ್ ಬ್ಯಾಂಕ್ ಮ್ಯಾನೇಜರ್ | - ಸದಸ್ಯರು |
| 6. ತೈಲ ಮಾರಾಟ ಕಂಪನಿಗಳ ಪ್ರತಿನಿಧಿಗಳು | - ಸದಸ್ಯರು |
| 7. ಸಹಾಯಕ ಆಯುಕ್ತರವರುಗಳು | - ಸದಸ್ಯರು |
| 8. ಜಿಲ್ಲಾಧಿಕಾರಿಯವರು ನಾಮ ನಿರ್ದೇಶಿಸಬಹುದಾದ ಇತರರು | - ಸದಸ್ಯರು |
| 9. ತೈಲ ಮಾರಾಟ ಕಂಪನಿಗಳ ಜಿಲ್ಲಾ ಮಟ್ಟದ ಸಮನ್ವಯಕರು | - ಸಂಚಾಲಕರು |

6. ಜಿಲ್ಲಾ/ಸ್ಥಳೀಯ ಮಟ್ಟದಲ್ಲಿ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಅನುವಾಗಲು ವಿವಿಧ ಪಾಲುದಾರರುಗಳ (various stakeholders) ನಡುವೆ ಸರಿಯಾದ ಸಮನ್ವಯ ಇರುವುದನ್ನು ಜಿಲ್ಲಾ ಮಟ್ಟದ ಈ ಸಮಿತಿಯು ನೋಡಿಕೊಳ್ಳತಕ್ಕದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

26/7/13

(ವೈ.ಸುಶೀಲ)
ಪೀಠಾಧಿಕಾರಿ-1 (ಪ್ರಭಾರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು. ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಈ ಆದೇಶವನ್ನು ಪ್ರಕಟಿಸಿ, 200 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ(ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

ಗೆ,

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರುಗಳು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು
8. ಸರ್ಕಾರದ ಕಾರ್ಯದರ್ಶಿಯವರು, ಸಿಆಸುಇ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು
9. ಜಿಲ್ಲಾಧಿಕಾರಿಗಳು
10. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್
11. ಆಯುಕ್ತರು/ಮುಖ್ಯಾಧಿಕಾರಿಯವರು, ನಗರಪಾಲಿಕೆ ಮತ್ತು ಪುರಸಭೆಗಳು.
12. ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಅಂಬೇಡ್ಕರ್ ಭವನ, ಬೆಂಗಳೂರು
13. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ನಿರ್ದೇಶಕರು, ಜನಗಣತಿ ಇಲಾಖೆ, ಬೆಂಗಳೂರು
15. ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ
16. ಡೆಪ್ಯೂಟಿ ಡೈರೆಕ್ಟರ್ ಜನರಲ್, ಯುಐಡಿಎಐ, ಪ್ರಾದೇಶಿಕ ಕಛೇರಿ, ಬೆಂಗಳೂರು
17. ಉಪ ವಿಭಾಗಗಳ ಎಲ್ಲಾ ಸಹಾಯಕ ಆಯುಕ್ತರವರುಗಳು
18. ಎಲ್ಲಾ ಜಿಲ್ಲೆಗಳ ಲೀಡ್ ಬ್ಯಾಂಕ್ ಮ್ಯಾನೇಜರ್‌ಗಳವರಿಗೆ
19. ಶ್ರೀ ದಿಲೀಪ್ ರೈ, ಮುಖ್ಯ ವ್ಯವಸ್ಥಾಪಕರು(ಎಲ್‌ಪಿಜಿ), ಐಓಸಿಎಲ್, ಇಂಡಿಯನ್ ಆಯಿಲ್ ಭವನ, ನಂ 29, ಪಿ ಕಳಿಂಗ ರಸ್ತೆ, ಬೆಂಗಳೂರು-560 027.
20. ಜನರಲ್ ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್ ಮತ್ತು ಸಂಚಾಲಕರು ಎಸ್‌ಎಲ್‌ಬಿಸಿ
21. ಶ್ರೀ ಅಜಯ್ ಸಿರ್ಕೆ, ಟೆರಿಟರಿ ಮ್ಯಾನೇಜರ್, 7ನೇ ಮಹಡಿ, ಬಿಪಿಸಿಎಲ್ ಕಚೇರಿ, ಟ್ರಿನಿಟಿ ಕಟ್ಟಡ, ಎಂ.ಜಿ ರಸ್ತೆ, ಬೆಂಗಳೂರು-560 001.
22. ಶ್ರೀ ಕೆ. ಶ್ರೀನಿವಾಸ್, ಡಿಜಿಎಮ್, (ಎಲ್‌ಪಿಜಿ), ಎಲ್‌ಪಿಜಿ ಎಸ್ ಬಿ ಯು, ದಕ್ಷಿಣ ವಲಯ, 4ನೇ ಮಹಡಿ, ಗಾಂದಿ ಇರ್ವಿನ್ ರಸ್ತೆ, ಸಿಎಮ್‌ಡಿಎ ಕಟ್ಟಡ, ಎಗ್ಮೋರ್, ಚೆನ್ನೈ-600008
23. ಜಿಲ್ಲಾಧಿಕಾರಿಯವರು ನಾಮ ನಿರ್ದೇಶಿಸಬಹುದಾದ ಇತರರು.

ಪ್ರತಿ

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ(ಇ-ಆಡಳಿತ), ಇವರ ಆಪ್ತ ಸಹಾಯಕರು
3. ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ(ಇ-ಆಡಳಿತ), ಇವರ ಆಪ್ತ ಸಹಾಯಕರು